ಭೀಕರ ಆಪತ್ಕಾಲದಲ್ಲಿ ಸಮಾಜವು ಜೀವಂತವಾಗಿರಲು ವಿವಿಧ ಉಪಾಯಗಳನ್ನು ಹೇಳುವ ಗ್ರಂಥಗಳನ್ನು ಮೊದಲೇ ಪ್ರಕಟಿಸುವ ಏಕೈಕ ದ್ರಷ್ಟಾರ : ಪರಾತ್ಪರ ಗುರು ಡಾ. ಆಠವಲೆ !

**‘ಹಿಂದೂ ಜನಜಾಗೃತಿ ಸಮಿತಿ’ ಪುರಸ್ಕೃತ ಗ್ರಂಥ !**

**ಮಹಾಯುದ್ಧದ ಕಾಲದಲ್ಲಿ ಕುಟುಂಬ ಮತ್ತು ಸಮಾಜ ಇವುಗಳ ರಕ್ಷಣೆಗಾಗಿ, ಅದೇರೀತಿ ದಿನನಿತ್ಯದಲ್ಲಿಯೂ ಉಪಯುಕ್ತ**

# ಅಗ್ನಿಶಮನ ತರಬೇತಿ

(Practical Training in Fire fighting) ಕನ್ನಡ (Kannada)


**ಸಂಕಲನಕಾರರು**

**ಶ್ರೀ. ನಿತಿನ್ ವಿನಾಯಕ ಸಹಕಾರಿ**

[ಬಿ.ಇ. (ಎಮ್.), ಮುಖ್ಯ ಅಭಿಯಂತರರು, ಮರ್ಚೆಂಟ್ ನೇವಿ]



**ಸನಾತನ ಸಂಸ್ಥೆ**


ಜೂನ್ ೨೦೨೩ ರವರೆಗೆ ಸನಾತನದ ೩೬೨ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೬೩,೮೭,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಜಾಹ್ನವಿ ಶಿಂದೆ ಮತ್ತು
ಶ್ರೀ. ಗುರುದಾಸ ಖಂಡೇಪಾರಕರ್

**First Edition** : Tulasi Vivaharambha, Kaliyug Varsh 5116
(4th November 2014)

**First Edition**
**Fourth Reprint** : Adhika Shravana Hunnime, Kaliyug Varsh 5125
(1st August 2023)

Translated from the original Marathi text 'Agnishaman Prashikshan'
ಪ್ರಸ್ತುತ ಗ್ರಂಥವು ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಡಾ. ಪ್ರಕಾಶ ಘಾಳಿ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 85 /-

**ISBN** : 978-93-82165-94-1

ॐ ಗ್ರಂಥ ಕ್ರ. : 77

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ಗ್ರಂಥದ ಅನುಕ್ರಮಣಿಕೆ

(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)


**ಅಧ್ಯಾಯ ೧. ಪ್ರಾಸ್ತಾವಿಕ / ಪೂರ್ವವಿವೇಚನೆ** ೯

**ಅಧ್ಯಾಯ ೨. ಬೆಂಕಿಯ ಶಾಸ್ತ್ರ** ೧೨

೨ ಅ. ಬೆಂಕಿಯಿಂದ ಸಿಗುವ ಉಷ್ಣತೆಯ ಉಗಮ ೧೨

೨ ಉ. ಬೆಂಕಿ ತಗಲುವುದರ ಸಾಮಾನ್ಯ ಕಾರಣಗಳು ೧೬

೨ ಊ. ಬೆಂಕಿ ಹರಡುವುದರ ಕಾರಣಗಳು ೧೬

**ಅಧ್ಯಾಯ ೩. ಅಗ್ನಿಶಮನ** ೨೧

೩ ಅ. ಬೆಂಕಿಯನ್ನು ನೋಡಿದಾಗ ನೀವೇನು ಮಾಡುವಿರಿ ? ೨೧

೩ ಆ. ಬೆಂಕಿಯನ್ನು ಹುಡುಕುವ ಉಪಕರಣಗಳು ಮತ್ತು ಅವುಗಳ ಉಪಯೋಗ ೨೨

೩ ಇ. ಅಗ್ನಿಶಮನದ ಪದ್ಧತಿ ೨೪

**ಅಧ್ಯಾಯ ೪. ಅಗ್ನಿಶಮನದ ಉಪಕರಣಗಳು** ೨೯

**ಅಧ್ಯಾಯ ೫. ಅಗ್ನಿಶಾಮಕ ದಳ** ೪೫

**ಅಧ್ಯಾಯ ೬. ಪ್ರಸಂಗ ಮತ್ತು ಪ್ರಾಸಂಗಿಕ ಪರಿಹಾರೋಪಾಯಗಳು** ೪೭

೬ ಅ. ಪ್ರತಿಕೂಲ ಪ್ರಸಂಗದಲ್ಲಿ ಒಬ್ಬರೇ ಬೆಂಕಿಯನ್ನು ಆರಿಸಲು ಪ್ರಯತ್ನಿಸಬಾರದು ೪೭

೬ ಆ. ಮನೆಗೆ ಬೆಂಕಿ ತಗಲಿರುವಾಗ ರಕ್ಷಣೆ ಮಾಡಿಕೊಳ್ಳುವುದು ೪೮

೬ ಎ. ಗೃಹೋಪಯೋಗಿ ಅನಿಲ ಸೋರಿದರೆ ಏನು ಮಾಡಬೇಕು ? ೫೦

**ಅಧ್ಯಾಯ ೭. ಅಗ್ನಿಪ್ರತಿಬಂಧಕ ಪರಿಹಾರೋಪಾಯಗಳು** ೫೪

**ಅಧ್ಯಾಯ ೮. ಸುಟ್ಟ ಗಾಯಗಳು ಮತ್ತು ಪ್ರಥಮ ಚಿಕಿತ್ಸೆ** ೭೦

**ಅಧ್ಯಾಯ ೯. ಬೆಂಕಿಯ ಕೆಲವು ಪ್ರಸಿದ್ಧ ಘಟನೆಗಳ ವಿಶ್ಲೇಷಣಾತ್ಮಕ ಅಧ್ಯಯನ** ೭೫

**ಅಧ್ಯಾಯ ೧೦. ಆಧ್ಯಾತ್ಮಿಕ ಶಕ್ತಿಯಿಂದ ಅಗ್ನಿಪ್ರಕೋಪ ನಿಲ್ಲಿಸುವುದು** ೮೦

**卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ !** ೮೬

## ಮನೋಗತ

'ಒಂದು ಚಿಕ್ಕ ಕಿಡಿಯಿಂದ ಉದ್ಭವಿಸಿದ ಬೆಂಕಿಯು ಚಿಕ್ಕದಾಗಿಯೇ ಕೊನೆಗೊಳ್ಳುತ್ತದೆ ಎಂದೇನಿಲ್ಲ' ಎಂಬ ಒಂದು ಆಂಗ್ಲ ನುಡಿಯಿದೆ. ಕೇವಲ ಈ ನುಡಿಯಿಂದ ಬೆಂಕಿಯ ದಾಹಕತೆ, ಸಂಹಾರಕತೆ ಅಥವಾ ಅದರ ಭೀಕರ ಪರಿಣಾಮದ ಗಾಂಭೀರ್ಯತೆ ಗಮನಕ್ಕೆ ಬರುವುದಿಲ್ಲ; ಬೆಂಕಿಯ ಪ್ರತ್ಯಕ್ಷ ಅನುಭವ ಪಡೆದವರಿಗೆ ಮಾತ್ರ ಅದರ ಕಲ್ಪನೆಯಿರುತ್ತದೆ. 'ಬೆಂಕಿ'ಯು ದೈನಂದಿನ ಜೀವನದಲ್ಲಿನ ಒಂದು ಅತ್ಯಾವಶ್ಯಕ ಘಟಕವಾಗಿದ್ದರೂ, ಅದರ ಬಗೆಗಿನ ನಿಯಂತ್ರಿತ ಮತ್ತು ಅನಿಯಂತ್ರಿತ ಬೆಂಕಿ ಇವುಗಳ ನಡುವಿನ ಲಕ್ಷ್ಮಣರೇಖೆಯು ಬಹಳ ಮಹತ್ವದ್ದಾಗಿದೆ. ಸಾಮಾನ್ಯವಾಗಿ ಮನುಷ್ಯನು ಉಪಯೋಗಿಸುವ ಎಲ್ಲ ಬೆಂಕಿಗಳೂ ನಿಯಂತ್ರಿತವಾಗಿರುತ್ತವೆ; ಆದರೆ ಯಾವುದಾದರೊಂದು ಪ್ರಸಂಗದಲ್ಲಿ ಬೆಂಕಿ ನಿಯಂತ್ರಣದ ಲಕ್ಷ್ಮಣರೇಖೆಯನ್ನು ದಾಟಬಹುದು. ಹೀಗಾದರೆ ಅದಕ್ಕೇನು ಪರಿಹಾರೋಪಾಯಗಳನ್ನು ಮಾಡಬೇಕು ಎಂಬುದು ಆ ಬೆಂಕಿಯನ್ನು ಉಪಯೋಗಿಸುವವರಿಗೆ ಗೊತ್ತಿರುವುದು ಮಹತ್ವದ್ದಾಗಿರುತ್ತದೆ. ದೊಡ್ಡ ದೊಡ್ಡ ಕಾರ್ಖಾನೆ, ಸಾರಿಗೆ ಹಡಗು, ವಿಮಾನ ಇತ್ಯಾದಿಗಳಲ್ಲಿ ಅಗ್ನಿಶಮನದ ತರಬೇತಿಯನ್ನು ಕೊಡಲಾಗುತ್ತದೆ; ಆದರೆ ಖೇದವೆಂದರೆ ಸಾಮಾನ್ಯ ಮನುಷ್ಯ, ಹಾಗೆಯೇ ದಿನದಲ್ಲಿ ೫-೬ ಗಂಟೆ ಬೆಂಕಿಯ ಮೇಲೆ ಅಡುಗೆ ಮಾಡುವ ಗೃಹಿಣಿಯು ಬೆಂಕಿಯ ಶಾಸ್ತ್ರ ಮತ್ತು ಅಗ್ನಿಶಮನದ ಉಪಾಯಗಳ ಬಗ್ಗೆ ಸಂಪೂರ್ಣ ಅನಭಿಜ್ಞಳಾಗಿರುತ್ತಾಳೆ. ಈ ಅಜ್ಞಾನದಿಂದ ಅನೇಕ ಅಪಘಾತಗಳು ಘಟಿಸುತ್ತವೆ. ಬೆಂಕಿಯ ಶಾಸ್ತ್ರ, ಅಗ್ನಿಶಮನದ ವಿವಿಧ ಮಾಧ್ಯಮಗಳು ಮತ್ತು ಅವುಗಳನ್ನು ಉಪಯೋಗಿಸುವ ಪದ್ಧತಿ, ತಪ್ಪು ಮಾಧ್ಯಮಗಳನ್ನು ಉಪಯೋಗಿಸುವುದರಿಂದಾಗುವ ದುಷ್ಪರಿಣಾಮಗಳು ಇತ್ಯಾದಿಗಳ ಬಗ್ಗೆ ಶಾಸ್ತ್ರೀಯ ದೃಷ್ಟಿಯಿಂದ ಮತ್ತು ಸುಲಭ ಭಾಷೆಯಲ್ಲಿ ಜ್ಞಾನ ನೀಡುವುದು ಈ ಗ್ರಂಥದ ಮುಖ್ಯ ಉದ್ದೇಶವಾಗಿದೆ.

ಹಿಂದೂ ಧರ್ಮದಲ್ಲಿ ಪ್ರತಿಯೊಬ್ಬ ಮನುಷ್ಯನು, ದೇವಋಣ, ಪಿತೃಋಣ, ಋಷಿಋಣ ಮತ್ತು ಸಮಾಜಋಣ ಎಂಬ ನಾಲ್ಕು ಋಣಗಳನ್ನು ತೀರಿಸುವುದು ಅವನ ವಿಹಿತ ಕರ್ತವ್ಯವೆಂದು ಪರಿಗಣಿಸಲಾಗಿದೆ. ಪರಸ್ಪರ ಸಹಕಾರ ಮತ್ತು ಪರೋಪಕಾರದಿಂದ ಸಮಾಜಋಣವನ್ನು ತೀರಿಸಲು ಸಾಧ್ಯವಾಗುತ್ತದೆ. ಅಗ್ನಿಶಮನ ತರಬೇತಿಯ ಜ್ಞಾನವನ್ನು ಮೈಗೂಡಿಸಿಕೊಂಡು ಸಮಯ ಬಂದಾಗ ಅದನ್ನು ಸಮಾಜಕ್ಕಾಗಿ ಉಪಯೋಗಿಸಿ ಸಮಾಜಋಣವನ್ನು ತೀರಿಸಬಹುದು.

ಅಗ್ನಿಪ್ರಳಯದ ಆಪತ್ತಿನಿಂದ ರಾಷ್ಟ್ರದ ಜೀವಹಾನಿ ಮತ್ತು ವಿತ್ತಹಾನಿ ಈ ಎರಡೂ ವಿಧದ ಹಾನಿಗಳು ಬಹುದೊಡ್ಡ ಪ್ರಮಾಣದಲ್ಲಿ ಆಗುತ್ತಿರುತ್ತವೆ. ಈ ಹಾನಿಗಳನ್ನು ತಡೆಯಲು ಪ್ರಯತ್ನಿಸುವುದೆಂದರೆ ರಾಷ್ಟ್ರಹಿತ ಮತ್ತು ರಾಷ್ಟ್ರರಕ್ಷಣೆಯ

ಕಾರ್ಯದಲ್ಲಿ ಸಹಭಾಗಿಯಾಗುವುದು. ರಾಷ್ಟ್ರದ ಆಯುಷ್ಯದಲ್ಲಿ ಸಮಷ್ಟಿಯ ಜೀವನ ಸೇರಿಕೊಂಡಿರುತ್ತದೆ; ಏಕೆಂದರೆ ರಾಷ್ಟ್ರ ಉಳಿದರೆ ಸಮಾಜ ಉಳಿಯುತ್ತದೆ ಮತ್ತು ಸಮಾಜ ಉಳಿದರೆ ವ್ಯಕ್ತಿ ಉಳಿಯುತ್ತಾನೆ. ವ್ಯಕ್ತಿ ಉಳಿದರೆ ಮಾತ್ರ ಸಾಧನೆಯನ್ನು ಮಾಡಬಲ್ಲನು. ಆದುದರಿಂದ ಸ್ವಹಿತ ಮತ್ತು ರಾಷ್ಟ್ರರಕ್ಷಣೆಗಾಗಿ 'ಅಗ್ನಿಶಮನ ತರಬೇತಿ' ವಿಷಯದ ಮಹತ್ವವನ್ನು ಎಲ್ಲರೂ ತಿಳಿದುಕೊಳ್ಳುವುದು ಆವಶ್ಯಕವಾಗಿದೆ.

ಈ ಗ್ರಂಥದಲ್ಲಿರುವ ಜ್ಞಾನವನ್ನು ಓದಿ ಅಗ್ನಿಪ್ರಕೋಪದ ಆಪತ್ತುಗಳಿಂದ ತಮ್ಮನ್ನು, ಹಾಗೆಯೇ ಸಾಧನೆಯೆಂದು ಸಮಾಜ ಮತ್ತು ರಾಷ್ಟ್ರವನ್ನು ರಕ್ಷಿಸುವ ಕ್ಷಮತೆಯು ಪ್ರತಿಯೊಬ್ಬರಲ್ಲಿಯೂ ನಿರ್ಮಾಣವಾಗಲೆಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

'ಮುಂಬರುವ ಆಪತ್ಕಾಲದ ಸಂಜೀವಿನಿ' ಮಾಲಿಕೆಯ ಗ್ರಂಥ !

## ನಾಮಜಪಗಳಿಂದ ದೂರವಾಗುವ ರೋಗಗಳು

ಪ್ರಸ್ತುತ ಗ್ರಂಥದಲ್ಲಿ ಕೆಲವು ದೇವರ ನಾಮಜಪವು (ವಿಶೇಷವಾಗಿ ತಮ್ಮ ಉಪಾಸ್ಯ ದೇವತೆಯ ನಾಮಜಪವು) ಯಾವ ರೋಗಗಳಿಗೆ ಉಪಯುಕ್ತ ಎಂಬುದು ಮೇಲ್ನೋಟಕ್ಕೆ ತಿಳಿಯಲು ಅವುಗಳನ್ನು ಪಟ್ಟಿಯ ಸ್ವರೂಪದಲ್ಲಿ ಕೊಡಲಾಗಿದೆ. ರೋಗ ನಿವಾರಣೆಗಾಗಿ ನಾಮಜಪದಂತೆಯೇ ಕೈಯಿಂದ ಮುದ್ರೆ ಮತ್ತು ನ್ಯಾಸವನ್ನೂ ಮಾಡಿದರೆ ಉಪಾಯದ ಫಲನಿಷ್ಪತ್ತಿ ಹೆಚ್ಚಾಗುತ್ತದೆ. ಆದ್ದರಿಂದ ಗ್ರಂಥದಲ್ಲಿ ಅವುಗಳನ್ನೂ ಕೊಡಲಾಗಿದೆ.

## 'ಅಗ್ನಿಶಮನ ತರಬೇತಿ' ಸಂದರ್ಭದಲ್ಲಿ ಸನಾತನದ ಇಂದಿನವರೆಗಿನ ಪ್ರಬೋಧನಾತ್ಮಕ ಕಾರ್ಯ !

ಸನಾತನವು 'ಅಗ್ನಿಶಮನ ತರಬೇತಿ' ಗ್ರಂಥವನ್ನು ಪ್ರಕಾಶಿಸುವುದರ ಜೊತೆಗೆ 'ಅಗ್ನಿಶಮನ ಹೇಗೆ ಮಾಡಬೇಕು' ಎಂದು ಕಲಿಸುವ 'ಅಗ್ನಿಶಮನ ತರಬೇತಿವರ್ಗ'ಗಳನ್ನು ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಲ್ಲಲ್ಲಿ ಆಯೋಜಿಸಲಾಗುತ್ತಿದೆ. ಅಂದಾಜು ೧ ಸಾವಿರ ಜನರು ಅದರ ಲಾಭ ಪಡೆದಿದ್ದಾರೆ. ಹಾಗೆಯೇ ಸನಾತನವು ಠಾಣೆಯ ಬಾಳಕುಮ್ ಎಂಬಲ್ಲಿನ 'ಫೈರ್‌ಸ್ಟೇಶನ್' ಸಹಾಯದಿಂದ ೫೦ ಜನರಿಗೆ ಅಗ್ನಿಶಮನದ ಆಧುನಿಕ ತರಬೇತಿ ನೀಡಿತು.